ಗರಿಷ್ಠ 36°c | ಕನಿಷ್ಠ 23°c

ಸುದ್ದಿ ಸಿಂಚನ

ಮಹಾಪಯಣ ಪುಸ್ತಕ ಬಿಡುಗಡೆ ಇಂದು

ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮಂಜುಳಾ ವೆಂಕಟೇಶಯ್ಯ ಅವರ ಮಹಾಪಯಣ ಕವನ ಸಂಕಲನ ಲೋಕಾರ್ಪಣೆ ಸಮಾರಂಭ ಮೇ 5ರಂದು ಸಂಜೆ 6ಕ್ಕೆ ನಗರದ ತೋಂಟದ ಸಿದ್ಧಲಿಂಗ ಶ್ರೀಗಳ ಕನ್ನಡ ಭವನ ಕಸಾಪ ಕಾರ್ಯಾಲಯದಲ್ಲಿ ನಡೆಯಲಿದೆ. ಪುಸ್ತಕ ಬಿಡುಗಡೆಯನ್ನು ಮಂಜುಳಾ ವೆಂಕಟೇಶಯ್ಯ ಅವರ ಮೊಮ್ಮಗ ಅನಿಕೇತ ಮಾಡುವರು. ಅಧ್ಯಕ್ಷತೆಯನ್ನು ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ವಹಿಸುವರು. ಚಿಂತಕಿ ಸಾವಿತ್ರಿ ಮುಜುಮದಾರ ಅವರು ಪರಿಚಯಿಸುವರು. ಮುಖ್ಯ ಅತಿಥಿಗಳಾಗಿ ಸಾಹಿತಿ ಪ್ರೊ. ಚಂದ್ರಶೇಖರ ವಸ್ತ್ರದ ಭಾಗವಹಿಸುವರು ಎಂದು ಕಾರ್ಯದರ್ಶಿ ಕಿಶೋರಬಾಬು ನಾಗರಕಟ್ಟಿ, ದತ್ತಪ್ರಸನ್ನ ಪಾಟೀಲ, ಡಿ.ಎಸ್. ಬಾಪುರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

421 ಬೆಳೆವಿಮೆ ಪ್ರಸ್ತಾವನೆ ತಿರಸ್ಕೃತ: ಕುಲಕರ್ಣಿ

ನರಗುಂದ: ಮುಂಗಾರು ಮತ್ತು ಹಿಂಗಾರು ಹಂಗಾಮಿನ 2024- 25ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಬೆಳೆ ಸಮೀಕ್ಷೆಯೊಂದಿಗೆ ಹೊಂದಾಣಿಕೆ ಆಗದೆ ಇರುವ ತಾಲೂಕಿನ ಮುಂಗಾರು ಹಂಗಾಮಿನ 233, ಹಿಂಗಾರು ಹಂಗಾಮಿನ 188 ಸೇರಿ ಒಟ್ಟು 421 ಬೆಳೆವಿಮೆ ಪ್ರಸ್ತಾವನೆಗಳು ವಿಮಾ ಸಂಸ್ಥೆಯಿಂದ ತಿರಸ್ಕೃತಗೊಂಡಿವೆ.

ಗ್ರಾಮವಾರು ತಿರಸ್ಕೃತಗೊಂಡಿರುವ ಪ್ರಸ್ತಾವನೆಗಳ ಮಾಹಿತಿಯನ್ನು ನರಗುಂದ ಹಾಗೂ ತಾಲೂಕಿನ ಕೊಣ್ಣೂರಿನ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಚೇರಿಗಳ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ರೈತರು ಆಕ್ಷೇಪಣೆಗಳಿದ್ದರೆ ಮೇ 12ರೊಳಗಾಗಿ ಸಲ್ಲಿಸಬೇಕು ಎಂದು ತಾಲೂಕು ಸಹಾಯಕ ನಿರ್ದೇಶಕ ಎಂ.ಎಸ್. ಕುಲಕರ್ಣಿ ಅವರು ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಮಾರುಕಟ್ಟೆ ಧಾರಣೆ

ಗದಗ

ಉತ್ಪನ್ನ	ಕನಿಷ್ಠ	ಗರಿಷ್ಠ
ಕಡಲೆ	2897	5629
ಉದ್ದಿನಕಾಳು	5712	5712
ಹತ್ತಿ	7801	7801
ಅಲಸಂದೆ	1661	5936
ಹೆಸರು	1244	6551
ಗೆಜ್ಜೆ ಶೇಂಗಾ	4470	6697
ಹುರುಳಿ ಕಾಳು	2608	4311
ಜೋಳ	2112	4412
ಮೆಕ್ಕೆಜೋಳ	1660	1740
ಸಾಸಿವೆ	3669	3669
ಕುಸುಬೆ	2009	5309
ಸೂರ್ಯಕಾಂತಿ	5969	6589
ತೊಗರಿ	3065	4412
ಗೋದಿ	1465	5095

ಲಕ್ಷ್ಮೇಶ್ವರ

ಉತ್ಪನ್ನ	ಕನಿಷ್ಠ	ಗರಿಷ್ಠ
ಅಲಸಂದೆ ಕಾಳು	1935	5785
ಕಡಲೆ	2379	5349
ಕೊತ್ತಂಬರಿ ಬೀಜ	9115	9115
ಹೆಸರು	1055	6919
ಗೆಜ್ಜೆ ಶೇಂಗಾ	2015	8570
ಹುರುಳಿ ಕಾಳು	3119	4089
ಜೋಳ	1509	3369
ಮಡಿಕೆ	5060	13330
ಸಾಸಿವೆ	4519	5939
ನವಣೆ	2015	3150
ಸೋಯಾಬಿನ್	3259	6069
ಸೂರ್ಯಕಾಂತಿ	5629	6189
ಗೋದಿ	2019	2665



ಮುಳಗುಂದ ಸಮೀಪದ ಹರ್ತಿ ಗ್ರಾಮದ 3ನೇ ವಾರ್ಡ್‌ನಲ್ಲಿ ಅಂದಾಜು ಮೊತ್ತ ₹20 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಭೂಮಿಪೂಜೆ ನೆರವೇರಿಸಿದರು. ಅಶೋಕ ಮಂದಾಲಿ, ಎಸ್.ಎಸ್. ಪಾಟೀಲ ಇತರರು ಇದ್ದರು.



ಮುಳಗುಂದ ಸಮೀಪದ ಹರ್ತಿ ಗ್ರಾಮದಲ್ಲಿ ಬಸವೇಶ್ವರ ದೇವಸ್ಥಾನದ ಹತ್ತಿರ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ನೆರವೇರಿಸಿದರು. ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ ಇತರರು ಇದ್ದರು.

ಕಸಾಪ ಸಂಸ್ಥಾಪನಾ ದಿನಾಚರಣೆ ಇಂದು

• **ಕನ್ನಡಪ್ರಭ ವಾರ್ತೆ** ಗದಗ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನದ ಅಂಗವಾಗಿ ಉಪನ್ಯಾಸ ಹಾಗೂ ಸನ್ಮಾನ ಕಾರ್ಯಕ್ರಮ ಮೇ 5ರಂದು ಬೆಳಗ್ಗೆ 10.30ಕ್ಕೆ ನಗರದ ಡಿಜಿಎಂ ಆಯುರ್ವೇದ ಮಹಾವಿದ್ಯಾಲಯದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ವಹಿಸುವರು. ಸಾಹಿತ್ಯ, ಸಂಸ್ಕೃತಿ ಸಂವರ್ಧನೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರ ಕುರಿತು ಲಕ್ಷ್ಮೇಶ್ವರದ ನ್ಯಾಯವಾದಿ ಬಸವರಾಜ ಬಾಳೇಶ್ವರಮಠ ಉಪನ್ಯಾಸ ನೀಡುವರು.

ಕಾಯಕಯೋಗಿ ಪ್ರಶಸ್ತಿ ಪುರಸ್ಕೃತ ಎಸ್.ಎಸ್. ಪಟ್ಟಣಶೆಟ್ಟರ ಹಾಗೂ ಸರ್ಕಾರಿ ಪ್ರೌಢಶಾಲೆಯ ಅಭಿವೃದ್ಧಿಗೆ ಶ್ರಮಿಸಿದ ಡಾ. ಬಸವರಾಜ ಧಾರವಾಡ ಅವರನ್ನು ಸನ್ಮಾನಿಸಲಾಗುವುದು ಎಂದು ಕಾರ್ಯದರ್ಶಿ ಕಿಶೋರಬಾಬು ನಾಗರಕಟ್ಟಿ, ದತ್ತಪ್ರಸನ್ನ ಪಾಟೀಲ, ಡಿ.ಎಸ್. ಬಾಪುರಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂದೆ ಕೊರತೆ ಆತಂಕ: ಮುಂಗಾರು ಬಿತ್ತನೆ ಪೂರ್ವದಲ್ಲೇ ಗೊಬ್ಬರ ಖರೀದಿ

ಬಿತ್ತನೆಗೆ ಸುಮಾರು 25 ದಿನ ಮೊದಲೇ ಗೊಬ್ಬರ ಖರೀದಿ | ಮುಂದಿನ ಆದೇಶ ಮಾಡುವವರೆಗೆ ಗೊಬ್ಬರ ಮಾರಾಟ ಮಾಡದಂತೆ ಸೂಚನೆ ನೀಡಿದ ಕೃಷಿ ಇಲಾಖೆ

• **ಎಸ್.ಜಿ. ತೆಗ್ಗಿನಮನಿ**
ಕನ್ನಡಪ್ರಭ ವಾರ್ತೆ ನರಗುಂದ

ಜಿಲ್ಲೆಯ ಕೃಷಿ ಪ್ರಧಾನ ನರಗುಂದ ತಾಲೂಕಿನಲ್ಲಿ ರೈತರು ಸುಮಾರು 25 ದಿನಗಳ ನಂತರ ಮುಂಗಾರು ಬಿತ್ತನೆ ಆರಂಭಿಸುತ್ತಾರೆ. ಮುಂದಿನ ದಿನಗಳಲ್ಲಿ ರಾಸಾಯಿನಕ ಗೊಬ್ಬರ ಕೊರತೆಯಾಗಬಹುದು ಎಂದು ಬಿತ್ತನೆ ಪೂರ್ವದಲ್ಲೇ ಗೋಬ್ಬರ ಖರೀದಿಗೆ ಮುಂದಾಗಿದ್ದಾರೆ. ಈಗಾಗಲೇ ತಾಲೂಕಿನ ಜನರು ಮಧ್ಯ ಪ್ರಾಚ್ಯದಲ್ಲಿ ನಡೆದ ಯುದ್ದದಿಂದ ಮನೆ ಬಳಕೆಯ ಗ್ಯಾಸ್ ಸಿಲಿಂಡರ್, ಟ್ರ್ಯಾಕ್ಟರ್‌ಗಳಿಗೆ ಡಿಸೇಲ್ ಕೊರತೆಯಾಗಿ ಸಾಕಷ್ಟು ತೊಂದರೆ ಅನುಭವಿಸಿದ್ದಾರೆ. ಹೀಗಾಗಿ, ಮೊದಲೇ ಗೊಬ್ಬರ ಖರೀದಿ ಮಾಡಿದರೆ ಬಿತ್ತನೆ ಸಮಯದಲ್ಲಿ ಅನುಕೂಲವಾಗಲಿದೆ ಎಂದು ಪ್ರತಿದಿನ ಪಟ್ಟಣ ಹಾಗೂ ಗ್ರಾಮೀಣ ಭಾಗದ ಖಾಸಗಿ ಗೊಬ್ಬರ ಅಂಗಡಿಗಳಿಗೆ ಹೋಗಿ ಗೊಬ್ಬರ ಖರೀದಿಸುತ್ತಿರುವುದು ಕಂಡು ಬರುತ್ತಿದೆ.

10 ದಿನ ಮಾರಾಟ ಬಂದ್: ರೈತರು ಬಿತ್ತನೆ ಪೂರ್ವದಲ್ಲೇ ಅವಶ್ಯಕತೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡಿ ಸಂಗ್ರಹಿಸುತ್ತಿರುವುದರಿಂದ ಬಿತ್ತನೆ ವೇಳೆ ರೈತರಿಗೆ ಗೊಬ್ಬರ ಕೊರತೆಯಾಗಬಹುದು ಎಂದು ಮಾರಾಟ ಬಂದ್ ಮಾಡಲು ವ್ಯಾಪಾರಸ್ಥರಿಗೆ ಕೃಷಿ ಇಲಾಖೆ ತಿಳಿಸಿದೆ. ಕೃಷಿ ಇಲಾಖೆ ಆದೇಶ ಮಾಡವ ವರೆಗೆ ಗೊಬ್ಬರ ಮಾರಾಟ ಮಾಡಬಾರದು ಎಂದು ವ್ಯಾಪಾರಸ್ಥರಿಗೆ ತಿಳಿಸಿದ್ದರಿಂದ ಕಳೆದ 10 ದಿನಗಳಿಂದ ಗೊಬ್ಬರ ಮಾರಾಟ ತಾಲೂಕಿನಲ್ಲಿ ಸ್ಥಗಿತಗೊಂಡಿದೆ.

ನಿಯಮ ಕಡ್ಡಾಯ: ಮುಂದಿನ ದಿನಗಳಲ್ಲಿ ಬಹಳಷ್ಟು ರೈತರಿಗೆ ಕೊರತೆಯಾಗಬಹುದು ಎಂದು ಎಫ್.ಐ.ಡಿ. ನೋಂದಣಿ ಮಾಡಿದ ರೈತರ ಜಮೀನಿಗೆ ಅವಶ್ಯಕತೆ ಅನುಸಾರವಾಗಿ ಗೊಬ್ಬರ ನೀಡಲಾಗುವುದು ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಗೊಬ್ಬರ ಸಂಗ್ರಹ ವಿವರ: ತಾಲೂಕಿನಲ್ಲಿ ಡಿಎಪಿ 535 ಟನ್, ಎಂ.ಒ.ಪಿ. 155 ಟನ್, ಕಾಂಪ್ಲೆಕ್ಸ್ 545 ಟನ್, ಯೂರಿಯಾ 950 ಟನ್, ಎಸ್.ಎಸ್.ಪಿ 39 ಟನ್‌ನಷ್ಟು ವ್ಯಾಪಾರಸ್ಥರ ಹತ್ತಿರ ಸಂಗ್ರಹವಿದೆ.



ಬಿತ್ತನೆ ಪೂರ್ವದಲ್ಲೇ ಗೊಬ್ಬರ ಖರೀದಿ ಮಾಡಿ ಟ್ರ್ಯಾಕ್ಟರ್‌ನಲ್ಲಿ ಸಾಗಿಸುತ್ತಿರುವುದು.

> ಮಧ್ಯಪ್ರಾಚ್ಯದ ಯುದ್ಧದಿಂದ ಗೊಬ್ಬರ ಉತ್ಪಾದನೆ ಕಡಿಮೆ ಆಗಿದೆ. ಆದ್ದರಿಂದ ಕೃಷಿ ಇಲಾಖೆಯ ಅಧಿಕಾರಿಗಳು ಈಗಿನಿಂದಲೇ ತಾಲೂಕಿನ ರೈತರಿಗೆ ಕೊರತೆಯಾಗದಂತೆ ಕ್ರಮ ತೆಗೆದುಕೊಳ್ಳಬೇಕು. ಬೇರೆ ತಾಲೂಕಿನ ರೈತರಿಗೆ ಗೊಬ್ಬರ ನೀಡಬಾರದು.
> • **ವೀರಣ್ಣ ಸೊಪ್ಪಿನ** ಕರ್ನಾಟಕ ರೈತ ಸೇನೆ ತಾಲೂಕಾಧ್ಯಕ್ಷ

> ನಮ್ಮ ತಾಲೂಕಿನ ರೈತರ ಬಿತ್ತನೆಗೆ ಬೇಕಾದ ಅಗತ್ಯ ಗೊಬ್ಬರ ಹಂತ ಹಂತವಾಗಿ ಬರುತ್ತದೆ. ಆದ್ದರಿಂದ ಯಾವ ರೈತರೂ ಗೊಬ್ಬರ ಸಿಗುವುದಿಲ್ಲ ಎಂದು ಭಯ ಪಡಬಾರದು.
> • **ಎಂ.ಎಸ್. ಕುಲಕರ್ಣಿ** ತಾಲೂಕು ಕೃಷಿ ಸಹಾಯಕ ನಿರ್ದೇಶಕ

ಸಾಮೂಹಿಕ ವಿವಾಹ ಬಡವರಿಗೆ ವರದಾನ

5 ಜೋಡಿ ಸಾಮೂಹಿಕ ವಿವಾಹ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ರೋಣ

ಸಾಮೂಹಿಕ ವಿವಾಹಗಳು ಬಡವರ ಕಣ್ಣೀರು ಒರೆಸಲು ಸಹಾಯಕವಾಗಿದ್ದು, ದುಂದುವೆಚ್ಚಕ್ಕೆ ಕಡಿವಾಣ ಹಾಕುತ್ತವೆ ಎಂದು ಬಳಗಾನೂರಿನ ಶಿವಶಾಂತವೀರ ಶರಣರು ತಿಳಿಸಿದರು.

ತಾಲೂಕಿನ ಬೆಳವಣಿಕಿ ಗ್ರಾಮದ ವೀರಭದ್ರೇಶ್ವರ ರಥೋತ್ಸವ ಅಂಗವಾಗಿ ನಡೆದ ಸಾಮೂಹಿಕ ವಿವಾಹ, ಧರ್ಮಸಭೆಯ ನೇತೃತ್ವವಹಿಸಿ ಮಾತನಾಡಿ, ಜಾತ್ರೆಗಳು ಬದುಕಿಗೆ ಅರ್ಥ ಮತ್ತು ವೈಭವ ತರುತ್ತವೆ. ಮಾನವನ ಜನ್ಮದ ಸಾರ್ಥಕತೆಗೆ ಆಧ್ಯಾತ್ಮಿಕ ಕಾರ್ಯ, ದೈವಿಕ ಸಾಮಾಜಿಕ ಕಾರ್ಯಗಳು ಸಹಾಯಕವಾಗುತ್ತವೆ. ಹೂವಿನಂತೆ ಮನುಷ್ಯ ಜೀವಿತಾವಧಿಯಲ್ಲಿ ಸಾರ್ಥಕತೆ ಕಂಡುಕೊಳ್ಳಬೇಕು ಎಂದರು.

ಸಾನ್ನಿಧ್ಯ ವಹಿಸಿದ್ದ ಕಿಲ್ಲಾತೋರಗಲ್ಲ ಚನ್ನಮಲ್ಲಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಬೆಳವಣಕಿಯ ವಿದ್ಯಾರ್ಥಿನಿಯರು ವಾರ್ಷಿಕ ಪರೀಕ್ಷೆಗಳಲ್ಲಿ ಅಧಿಕ ಅಂಕ ಗಳಿಸುವ ಮೂಲಕ ಹೆಮ್ಮೆ ಪಡುವ ಸಾಧನೆ ಮಾಡಿದ್ದಾರೆ. ಇಂದಿನದು ಕಂಪ್ಯೂಟರ್‌ಹಾಗೂ ಪೈಪೋಟಿಯ ಯುಗವಾಗಿದ್ದು, ವಿದ್ಯಾರ್ಥಿಗಳು ಒಳ್ಳೆಯ ಅಂಕ ಸಂಪಾದಿಸಿ ಜೀವನ ರೂಪಿಸಿಕೊಳ್ಳಬೇಕೆಂದರು.

> ■ ಜಾತ್ರೆಗಳು ಬದುಕಿಗೆ ಅರ್ಥ ಮತ್ತು ವೈಭವ ತರುತ್ತವೆ. ಮಾನವನ ಜನ್ಮದ ಸಾರ್ಥಕತೆಗೆ ಆಧ್ಯಾತ್ಮಿಕ ಕಾರ್ಯ, ದೈವಿಕ ಸಾಮಾಜಿಕ ಕಾರ್ಯ ಸಹಾಯಕ

ಈ ವೇಳೆ 5 ಜೊತೆ ಸಾಮೂಹಿಕ ವಿವಾಹಗಳು ಜರುಗಿದವು. ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿಯರು ಹಾಗೂ ಗಣ್ಯರನ್ನು ಸನ್ಮಾನಿಸಲಾಯಿತು. ಗದುಗಿನ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು, ವಿ.ಎನ್. ಮೇಟಿ, ಆನಂದಯ್ಯ ಭೂಪಳಾಪೂರಮಠ, ಬಸವರಾಜ ಕಟಗೇರಿ, ಮಲ್ಲಿಕಾರ್ಜುನ ಹಿರೇಮಠ ಮುಂತಾದವರು ಇದ್ದರು. ಶಿವಕುಮಾರ ಹಾಲಭಾವಿ ಸ್ವಾಗತಿಸಿದರು. ಮಲ್ಲಣ್ಣ ದಾಧ್ಮಿ ವಂದಿಸಿದರು. ಸಂಕಪ್ಪ ಕುರಹಟ್ಟಿ ವಂದಿಸಿದರು.



ಕಾರ್ಯಕ್ರಮದಲ್ಲಿ ಬಳಗಾನೂರಿನ ಶಿವಶಾಂತವೀರ ಶರಣರು ಮಾತನಾಡಿದರು.

ಶಂಕರಾಚಾರ್ಯ ತತ್ವಶಾಸ್ತ್ರದ ಶ್ರೇಷ್ಠ ವ್ಯಕ್ತಿ

ಲಕ್ಷ್ಮೇಶ್ವರದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಗೋಪಾಲ ಪಡ್ನೀಸ್

• **ಕನ್ನಡಪ್ರಭ ವಾರ್ತೆ** ಲಕ್ಷ್ಮೇಶ್ವರ

ಶಂಕರಾಚಾರ್ಯರನ್ನು ಭಾರತೀಯ ತತ್ವಶಾಸ್ತ್ರದ ಶ್ರೇಷ್ಠ ವ್ಯಕ್ತಿಯಲ್ಲಿ ಒಬ್ಬರೆಂದು ಪರಿಗಣಿಸಲಾಗುತ್ತದೆ. ಅವರ ಅಲ್ಪಾವಧಿಯ ಜೀವಿತಾವಧಿಯಲ್ಲಿ ಹಿಂದೂ ಧರ್ಮದ ಪುನರುತ್ಥಾನಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ ಎಂದು ಬ್ರಹ್ಮವೃಂದದ ಅಧ್ಯಕ್ಷ ಗೋಪಾಲ ಪಡ್ನೀಸ್ ತಿಳಿಸಿದರು.

ಶುಕ್ರವಾರ ಪಟ್ಟಣದ ಶಂಕರ ಭಾರತಿ ಮಠದಲ್ಲಿ ಬ್ರಹ್ಮವೃಂದ ಮತ್ತು ಶಂಕರ ಸೇವಾ ಸಮಿತಿ ಆಶ್ರಯದಲ್ಲಿ ಶಂಕರಾಚಾರ್ಯರ ಜಯಂತಿ ಅಂಗವಾಗಿ ಸಂಗೀತ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು.

ಶಂಕರಾಚಾರ್ಯರರು ಜಗತ್ತಿನ ಎಲ್ಲ ಸಮಾಜದವರನ್ನು ಕೂಡಿಕೊಂಡು ಹೋಗುವ ಎಲ್ಲರೂ ಒಂದೇ ಎನ್ನುವ ಭಾವನೆಯನ್ನು ಸಮಾಜದಲ್ಲಿ ಬಿತ್ತುವ ಕಾರ್ಯ ಮಾಡಿ ಸಮಾನತೆಯ ತತ್ವವನ್ನು ಸಾರಿ ಹೇಳಿದ್ದರು ಎಂದರು.

ತಾಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೃಷ್ಣ ಕುಲಕರ್ಣಿ ಮಾತನಾಡಿ, ಶಂಕರಾಚಾರ್ಯರು ಹಿಂದೂ ಧರ್ಮಕ್ಕೆ ನೀಡಿದ ಕೊಡುಗೆಗಳು ಎಲ್ಲ ಕಾಲಕ್ಕೂ ಪ್ರಸ್ತುತ. ಸನಾತನ ಹಿಂದೂ ಧರ್ಮ ಇಷ್ಟೊಂದು ಬೆಳೆದು ನಿಲ್ಲಲು ಶಂಕರಾಚಾರ್ಯರು ಅಂದು ನೀಡಿದ ಕೊಡುಗೆಗಳೆ ಕಾರಣ ಎಂದರು.

ಈ ವೇಳೆ ಸಮಾಜದ ವತಿಯಿಂದ ಪಂ. ಚಿದಂಬರ ಜೋಶಿ ಅವರಿಗೆ ವಿಪ್ರ ಕಲಾಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ದಿಲೀಪ ಜೋಶಿ ಮತ್ತು ಶಹನಾಯಿ ವಾದಕ ಕೃಷ್ಣಾಜಿ ಕ್ಷತ್ರೀಯ ದಂಪತಿಯನ್ನು ಸನ್ಮಾನಿಸಲಾಯಿತು. ಗುರುರಾಜ ಪಾಟೀಲಕುಲಕರ್ಣಿ, ಅರವಿಂದ ದೇಶಪಾಂಡೆ, ಧ್ರುವರಾಜ ಬೆಟಗೇರಿ, ಡಾ. ಪ್ರಸನ್ನ ಕುಲಕರ್ಣಿ, ನಾರಾಯಣಭಟ್ ಪುರಾಣಿಕ, ರಾಜಾಚಾರ್ಯ ರಾಯಚೂರ, ಎ.ಪಿ. ಕುಲಕರ್ಣಿ, ಕೃಷ್ಣಕುಮಾರ ಕುಲಕರ್ಣಿ, ಧೀರೇಂದ್ರರಾಚಾರ್ಯ ರಾಯಚೂರ, ಶ್ರೀಕಾಂತ ಪೂಜಾರ, ದಿಗಂಬರ ಪೂಜಾರ, ನಾಗರಾಜ ಪೂಜಾರ, ಚಿಕ್ಕರಸ ಪೂಜಾರ, ವಿಕ್ರಮ ಶಿರೋಳ, ಅನಿಲ ಕುಲಕರ್ಣಿ, ರಾಘವೇಂದ್ರ ಪೂಜಾರ, ರಾಜು ಹುಲಮನಿ, ಅನಂತಭಟ್ ಪೂಜಾರ ಇದ್ದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿದ ಸಮಾಜದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹರ್ತಿ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಸಚಿವರಿಂದ ಚಾಲನೆ

• **ಕನ್ನಡಪ್ರಭ ವಾರ್ತೆ** ಮುಳಗುಂದ

ಸಮೀಪದ ಹರ್ತಿ ಗ್ರಾಮದಲ್ಲಿ ಬಸವೇಶ್ವರ ದೇವಸ್ಥಾನದ ಹತ್ತಿರ ಗೌರವ ಘಟಕ ಹಾಗೂ ತಡೆಗೋಡೆ ನಿರ್ಮಾಣ ಕಾಮಗಾರಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ನೆರವೇರಿಸಿದರು.

ನಂತರ ಗ್ರಾಮದಲ್ಲಿ ನಡೆದ ಬುದ್ಧ, ಬಸವ, ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ಅವರು ಧ್ವನಿ ಇಲ್ಲದವರಿಗೆ ಧ್ವನಿಯಾಗಿ ನಿಲ್ಲುವ ಶಕ್ತಿಯನ್ನು ದೇಶಕ್ಕೆ ನೀಡಿದ್ದಾರೆ. ಬುದ್ಧ ಸಮ ಬಾಳು- ಸಮಪಾಲು ಎಂಬ ತತ್ವವನ್ನು ಸಾರಿದರೆ, ಬಸವಣ್ಣನವರು ಇವ ನಮ್ಮವ ಎಂಬ ಸಮಾನತೆಯ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ ಎಂದರು.

ವಿವಿಧ ಕಾಮಗಾರಿಗಳಿಗೆ ಚಾಲನೆ: ಗ್ರಾಮದ ಶಿವ- ಪಾರ್ವತಿ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿ, ಗ್ರಾಮ ಚವಡಿ ಕಟ್ಟಡ ನಿರ್ಮಾಣ, ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಸಚಿವರು ಚಾಲನೆ ನೀಡಿದರು.

ಈ ವೇಳೆ ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಎಸ್.ಎಸ್. ಪಾಟೀಲ, ಅಪ್ಪಣ್ಣ ಇನಾಮತಿ, ಬಸವರಾಜ ಕಡೇಮನಿ, ಸಿಂಗಾಡಿ, ಶರೀಫನವರ್, ಎ.ಸಿ ಗಂಗಪ್ಪ, ಡಾ. ಜಿನಗಾ, ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಗಂಗಾಧರ ಶಿರೋಳ, ಪ್ರವಾಸೋದ್ಯಮ ಇಲಾಖೆಯ ಕೊಟ್ರೇಶ ವಿಭೂತಿ, ಪ್ರಭು ಹುಡೇದ, ಶಂಕ್ರಪ್ಪ ನವಲೆ, ಬಿ.ಟಿ. ಸೋಮರೆಡ್ಡಿ, ಸಿ.ವಿ. ಪಾಟೀಲ, ಬಸಪ್ಪ ಹೊನ್ನಪ್ಪನವರ, ಸೋಮರಡ್ಡಿ ರಡ್ಡೇರ, ಎನ್.ಡಿ. ಪಾಟೀಲ, ಮಲ್ಲಪ್ಪ ಹೊನ್ನಪ್ಪನವರ, ಮಹಾವೀರ ಹೊಂಬಣ್ಣವರ, ಪಿ.ಎಸ್. ಪಾಟೀಲ, ಹಸನಸಾಬ ಹಕರಕೀ, ಎಂ.ಬಿ. ಪಾಟೀಲ, ಬಸಪ್ಪ ಕಂಬಳಿ ಸೇರಿದಂತೆ ಅನೇಕ ಗಣ್ಯರು ಹಾಗೂ ಗ್ರಾಮಸ್ಥರು ಇದ್ದರು.

ಗೌರವ... ಬಸವ ಜಯಂತಿ, ಗುರುವಂದನೆ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಮುಂಡರಗಿ ಅನ್ನದಾನೀಶ್ವರ ಸ್ವಾಮೀಜಿ ಸಾಧನೆ ಮಾದರಿ

• **ಕನ್ನಡಪ್ರಭ ವಾರ್ತೆ** ಮುಂಡರಗಿ

ಡಾ. ಅನ್ನದಾನೀಶ್ವರ ಸ್ವಾಮೀಜಿಯವರು ಆಡಂಬರ, ಬಿಗುವು- ಬಿನ್ನಾಣವಿಲ್ಲದ ಜೀವನ ಇತರರಿಗೆ ಮಾದರಿಯಾಗಿದೆ. ನಯಾಪೈಸೆ ಕೊಡಬೇಕಾದರೂ, ಇತರರಿಂದ ಬರಬೇಕಾದರೂ ಅದನ್ನು ಲೆಕ್ಕ ಇಡುವ ಮತ್ತು ಕೇಳುವ ಪ್ರವೃತ್ತಿಯನ್ನು ಅವರಿಂದ ಕಲಿಯಬೇಕು ಎಂದು ಪತ್ರಕರ್ತ ಅಂದಾನಪ್ಪ ವಿಭೂತಿ ತಿಳಿಸಿದರು.

ಪಟ್ಟಣದ ಅನ್ನದಾನೀಶ್ವರ ಮಠದ ಶಿಲಾಮಂಟಪದಲ್ಲಿ ಸೋಮವಾರ ಜರುಗಿದ 893ನೇ ಬಸವ ಜಯಂತಿ, ಡಾ. ಅನ್ನದಾನೀಶ್ವರ ಸ್ವಾಮೀಜಿಯವರ 86ನೇ ಜನ್ಮದಿನೋತ್ಸವದ ಸಂಭ್ರಮಾಚರಣೆ ಹಾಗೂ 1946ನೇ ಶಿವಾನುಭವ ಮತ್ತು ಪ್ರತಿಭಾ ಪುರಸ್ಕಾರ ಹಾಗೂ ಗುರುವಂದನೆ ಕಾರ್ಯಕ್ರಮದಲ್ಲಿ ಅನ್ನದಾನೀಶ್ವರ ಜೀವನ ಹಾಗೂ ಸಾಹಿತ್ಯ ಕುರಿತು ಮಾತನಾಡಿದರು.

ಕರ್ನಾಟಕದ ಮಠಮಾನ್ಯಗಳಲ್ಲಿಯೇ ಆಚಾರ- ವಿಚಾರ ಶುದ್ಧವಾಗಿದ್ದು, ತ್ರಿಕಾಲ ಪೂಜಾನಿಷ್ಠರಾಗಿ, ಸಾಹಿತಿಗಳಾಗಿ, ಉತ್ತಮ ಆಡಳಿತಗಾರರಾಗಿ, ತಮ್ಮ ಮಠದ ಇತಿಹಾಸವನ್ನು ಅರಿತವರಾಗಿ ಭಕ್ತರ ಮನದಲ್ಲಿ ಉಳಿದುಕೊಂಡವರೆಂದರೆ ಅದು ಅನ್ನದಾನೀಶ್ವರ ಸ್ವಾಮೀಜಿ ಎಂದರು.

ಬರದ ನಾಡಿನಲ್ಲಿ ಶಿಕ್ಷಣ ಸಂಸ್ಥೆ ತೆರೆದು ಶಾಲಾ- ಕಾಲೇಜುಗಳನ್ನು ಪ್ರಾರಂಭಿಸಿ ಲಕ್ಷಾಂತರ ಬಡ ಮಕ್ಕಳಿಗೆ ದಾರಿದೀಪವಾಗಿದ್ದಾರೆ. ಅವರು 170ಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಶ್ರೀಗಳ ಕೃತಿಗಳ ಮೇಲೆ 4 ಜನರು ಪಿಎಚ್‌ಡಿ ಮತ್ತು 4 ಜನರು ಎಂಫಿಲ್ ಪದವಿ ಪಡೆದಿದ್ದಾರೆ ಎಂದರು.

ಜ.ಅ. ವಿದ್ಯಾ ಸಮಿತಿ ಆಡಳಿತಾಧಿಕಾರಿ ಡಾ. ಬಿ.ಜಿ. ಜವಳಿ ಮಾತನಾಡಿ, ಬಸವಣ್ಣನವರು 12ನೇ ಶತಮಾನದ ಕನ್ನಡದ ಒಬ್ಬ ತತ್ವಜ್ಞಾನಿ, ಸಾಮಾಜಿಕ ಸುಧಾರಕ ಮತ್ತು ಶಿವ ಕೇಂದ್ರೀಕೃತ ಭಕ್ತ ಚಳವಳಿಯಲ್ಲಿ ಕನ್ನಡ ಕವಿಯಾಗಿದ್ದರು. ಸಮಾನತೆ, ಕಾಯಕ, ದಾಸೋಹ ತತ್ವ ಆಚರಿಸುವುದರ ಮೂಲಕ ಬಸವಣ್ಣ ಮಾದರಿಯಾದರು ಎಂದರು.

ಡಾ. ಅನ್ನದಾನೀಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀಮಠದ ಉತ್ತರಾಧಿಕಾರಿ ಡಾ. ಮಲ್ಲಿಕಾರ್ಜುನ ಸ್ವಾಮೀಜಿ, ಡಾ. ಚನ್ನಮಲ್ಲ ಸ್ವಾಮೀಜಿ, ಇಮ್ಮಡಿ ನಿಜಗುಣ ಸ್ವಾಮೀಜಿ, ಅಭಿನವ ಚೆನ್ನಬಸವ ಸ್ವಾಮೀಜಿ, ಡಾ. ಮಹಾದೇವ ಸ್ವಾಮೀಜಿ, ಶಾಂತಲಿಂಗೇಶ್ವರ ಸ್ವಾಮೀಜಿ, ಹೊಳಲಿನ ಚೆನ್ನಬಸವ ದೇವರು ನೇತೃತ್ವ ವಹಿಸಿ ಪೂಜ್ಯರಿಗೆ ಪುಷ್ಪವೃಷ್ಟಿಯೊಂದಿಗೆ ಗುರುವಂದನೆ ಸಲ್ಲಿಸಿದರು. ಹೂವಿನಶಿಗ್ಲಿಯ ಚೆನ್ನವೀರ ಸ್ವಾಮೀಜಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಿಇಒ ಗಂಗಾಧರ ಅಣ್ಣಿಗೇರಿ, ಮುಖ್ಯಮಂತ್ರಿ ಪದಕ ಪುರಸ್ಕೃತ ಜಾಫರ ಬಚ್ಚೇರಿ, ಮನೋಹರ, ಹನುಮರಡ್ಡಿ ಇಟಗಿ ಅವರಿಗೆ ಗುರುರಕ್ಷೆ ಜರಗಿತು. ಸನ್ಮಾನಿತರ ಪರವಾಗಿ ಬಿಇಒ ಗಂಗಾಧರ ಅಣ್ಣಿಗೇರಿ ಮಾತನಾಡಿದರು. ಶ್ರೀಗಳ 86ನೇ ಜನ್ಮದಿನೋತ್ಸವದ ಅಂಗವಾಗಿ ಸರ್ಕಾರಿ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಹಣ್ಣುಗಳನ್ನು ವಿತರಿಸಲಾಯಿತು. ಗದಗ ಬಸವೇಶ್ವರ ರಕ್ತ ಭಂಡಾರದ ಸಹಯೋಗದಲ್ಲಿ ರಕ್ತದಾನ ಶಿಬಿರ, ಶ್ರೀ ಜ.ಅ.ಅಕ್ಕನ ಬಳಗದ ತಾಯಂದಿರಿಂದ ಗರ್ಭಿಣಿಯರಿಗೆ ಉಡಿ ತುಂಬುವ ಕಾರ್ಯಕ್ರಮ ಮತ್ತು ಸಸಿ ನೆಡುವ ಕಾರ್ಯಕ್ರಮಗಳು ಜರುಗಿದವು.

ಬಸವರಾಜ ಸಿದ್ದಣ್ಣವರ ಮತ್ತು ಶ್ರೀ.ಜ.ಅ. ಅಕ್ಕನ ಬಳಗದವರಿಂದ ಸಂಗೀತ ಸೇವೆ ಜರುಗಿತು. ಖುಷಿ ಮುರಡಿ ಭರತನಾಟ್ಯ ಪ್ರದರ್ಶಿಸಿದರು. ಗದಗಯ್ಯ ಗುರುಸ್ವಾಮಿಮಠ ಕಾರ್ಯಕ್ರಮದ ಭಕ್ತಿಸೇವೆ ವಹಿಸಿಕೊಂಡಿದ್ದರು. ಎಸ್.ಆರ್. ರಿತ್ತಿ ಮತ್ತು ಎಸ್.ಎಸ್. ಮಠದ ನಿರೂಪಿಸಿ, ವಂದಿಸಿದರು.




ಮುಂಡರಗಿಯ ಡಾ. ಅನ್ನದಾನೀಶ್ವರ ಸ್ವಾಮೀಜಿಯವರ 86ನೇ ಜನ್ಮದಿನೋತ್ಸವದ ಅಂಗವಾಗಿ ಉತ್ತರಾಧಿಕಾರಿ ಡಾ. ಮಲ್ಲಿಕಾರ್ಜುನ ಸ್ವಾಮೀಜಿಯವರ ನೇತೃತ್ವದಲ್ಲಿ ಗುರುವಂದನೆ ಸಲ್ಲಿಸಲಾಯಿತು.

ಆದಿ ಶಂಕರಾಚಾರ್ಯರ ತತ್ವ ಸಿದ್ಧಾಂತ ಪಾಲಿಸೋಣ

ನರಗುಂದ: ಆದಿ ಶಂಕರಾಚಾರ್ಯರರು ಈ ನಾಡಿಗೆ ಅದ್ವೈತ ತತ್ವ ಸಿದ್ಧಾಂತವನ್ನು ಇಡೀ ಜಗತ್ತಿಗೆ ಸಾರಿದ ಮಹಾನ ಪುರುಷರು. ಅವರ ಆದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಭಿನವ ಯಚ್ಚರ ಶ್ರೀಗಳು ಹೇಳಿದರು.

ತಾಲೂಕಿನ ಶಿರೋಳ ಗ್ರಾಮದ ಜಗದ್ಗುರು ಶ್ರೀ ಯಚ್ಚರಸ್ವಾಮಿಗಳ ಗವಿಮಠದಲ್ಲಿ ನಡೆದ 31ನೇ ಮಾಸಿಕ ಶಿವಾನುಭವ ಗೋಷ್ಠಿಯಲ್ಲಿ ಮಾತನಾಡಿ, ಶಂಕರಾಚಾರ್ಯರು ಸನಾತನ ಧರ್ಮ ಪುನರುತ್ಥಾನಕರು. ಸರ್ವರೂ ಬ್ರಹ್ಮನ ಸ್ವರೂಪಿಗಳೇ ಎಂಬ ಅದ್ವೈತ ತತ್ವಸಿದ್ಧಾಂತವನ್ನು ಇಡೀ ಜಗತ್ತಿಗೆ ಸಾರಿದ ಮಹಾನ ಪುರುಷ ಎಂದರು.

ಶಿಕ್ಷಕ ಪ್ರದೀಪ ಘಾಳಿ, ವಿಶ್ವೇಶ್ವರಯ್ಯ ಕೂಲಿ ಮತ್ತು ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಬಸವರಾಜ ಹೂಗಾರ ಮಾತನಾಡಿದರು. ಇದೇ ಸಂದರ್ಭದಲ್ಲಿ ಸರ್‌ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವ ಮೂಲಕ ವಿಶ್ವ ಕಾರ್ಮಿಕ ದಿನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಬಸವರಾಜ ಕುಪ್ಪಸ್ತ, ಮಲ್ಲಪ್ಪ ಚಿಕ್ಕನರಗುಂದ, ಗುರುಪಾದಪ್ಪ ಭಜಂತ್ರಿ, ಸುನೀಲ ಕಳಸದ ಇದ್ದರು.



ಯಚ್ಚರಸ್ವಾಮಿಗಳ ಗವಿಮಠದಲ್ಲಿ ನಡೆದ 31ನೇ ಮಾಸಿಕ ಶಿವಾನುಭವ ಗೋಷ್ಠಿಯನ್ನು ಉದ್ಘಾಟಿಸಲಾಯಿತು.

> ಲಸಿಕೆ ಪಡೆಯುವುದರಿಂದ ಸಾಂಕ್ರಾಮಿಕ ರೋಗಗಳನ್ನು ತಡೆಯಬಹುದು. ಅಲ್ಲದೇ ಮಕ್ಕಳನ್ನು ಗಂಭೀರ ಸಮಸ್ಯೆಗಳಿಂದ ರಕ್ಷಿಸಬಹುದಾಗಿದೆ.
> • **ಸರೋಜಾ ಕಟ್ಟಿಮನಿ** ತಾಲೂಕು ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ, ಗದಗ

ಸುದ್ದಿ ಸಿಂಚನ

ಬುದ್ಧ- ಬಸವ- ಅಂಬೇಡ್ಕರ್ ಜಯಂತ್ಯುತ್ಸವ ಇಂದು

ಗದಗ: ನಗರದ ಅಡವೀಂದ್ರಸ್ವಾಮಿ ಮಠದಲ್ಲಿ 347ನೇ ಮಾಸಿಕ ಶಿವಾನುಭವದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಜಯಂತ್ಯುತ್ಸವ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ ಮೇ 5ರಂದು ಸಂಜೆ 6.30ಕ್ಕೆ ಜರುಗಲಿದೆ. ಚಿಂತಕ ಪ್ರೊ. ಕೆ.ಎಚ್. ಬೇಲೂರ ಅವರು ಬುದ್ಧ- ಬಸವ- ಅಂಬೇಡ್ಕರ್‌ಅವರ ವಿಚಾರಧಾರೆ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ನಂತರ ಸಂವಾದ ಕೂಡ ಜರುಗಲಿದೆ. ಅಡವೀಂದ್ರಸ್ವಾಮಿ ಮಠದ ಧರ್ಮದರ್ಶಿ ಮಹೇಶ್ವರ ಸ್ವಾಮಿಗಳು ಸಮ್ಮುಖ ವಹಿಸಲಿದ್ದಾರೆ. ಶಿವಾನುಭವ ಸಮಿತಿಯ ಅಧ್ಯಕ್ಷ ಡಾ. ರಾಜೇಂದ್ರ ಎಸ್. ಗಡಾದ ಅಧ್ಯಕ್ಷತೆ ವಹಿಸುವರು. ನಗರಸಭೆ ಮಾಜಿ ಉಪಾಧ್ಯಕ್ಷ ಶಂಕರ ಹಾನಗಲ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಕಾಂಗ್ರೆಸ್ ವತಿಯಿಂದ ವಿಜಯೋತ್ಸವ ಇಂದು

ಗದಗ: ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಹಾಗೂ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಗೆಲುವು ಸಾಧಿಸಿದ ಹಿನ್ನೆಲೆ ಶಹರ ಕಾಂಗ್ರೆಸ್ ಸಮಿತಿ ಹಾಗೂ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯಿಂದ ವಿಜಯೋತ್ಸವವನ್ನು ಮೇ 5ರಂದು ಬೆಳಗ್ಗೆ 10ಕ್ಕೆ ನಗರದ ಹುಯಿಲಗೋಳ ನಾರಾಯಣರಾವ ವೃತ್ತ(ಟಾಂಗಾ ಕೂಟ)ದಲ್ಲಿ ಆಚರಿಸಲಿದೆ. ಕಾಂಗ್ರೆಸ್ ಪಕ್ಷದ ಹಿರಿಯರು, ಪ್ರಮುಖರು ಸದಸ್ಯರು, ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಪ್ರಕಟಣೆ ತಿಳಿಸಿದೆ.

ರೋಗ ತಡೆಗೆ ಲಸಿಕೆಗಳ ಪಾತ್ರ ಪ್ರಮುಖ

ಗದಗ: ರೋಗವನ್ನು ತಡೆಗಟ್ಟುವಲ್ಲಿ ಲಸಿಕೆಗಳ ಪಾತ್ರ ಪ್ರಮುಖವಾಗಿದೆ. ಆದರೆ ಅನೇಕರಲ್ಲಿ ಇರುವ ಭಯ ಅರಿವಿನ ಕೊರತೆಯಿಂದ ಜನರು ಅನೇಕ ಸಮಸ್ಯೆಗಳಿಗೆ ತುತ್ತಾಗುವಂತಾಗಿದೆ. ನವಜಾತ ಶಿಶುಗಳಿಗೆ ಅನೇಕ ಸಮಸ್ಯೆಗಳ ವಿರುದ್ಧ ಹೋರಾಡಲು ಲಸಿಕೆಗಳನ್ನು ನೀಡುವುದು ಅವಶ್ಯವಾಗಿದೆ ಎಂದು ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಡಾ. ರಾಜೇಂದ್ರ ಎಸ್. ಗಡಾದ ತಿಳಿಸಿದರು. ನಗರದ ಡಿಎಂಎಂ ಆಸ್ಪತ್ರೆಯ ಲಸಿಕಾ ಭವನದಲ್ಲಿ ನಡೆದ ವಿಶ್ವ ಲಸಿಕಾ ಸಪ್ತಾಹ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ, ಏಪ್ರಿಲ್ ಕೊನೆಯ ವಾರವನ್ನು ವಿಶ್ವ ಲಸಿಕಾ ಸಪ್ತಾಹವಾಗಿ ಆಚರಿಸುವುದರ ಜತೆಗೆ ಲಸಿಕೆಯ ಅಗತ್ಯತೆಗಳು ಮತ್ತು ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಸಿ ಹೇಳಲಾಗುವುದೆಂದರು. ತಾಲೂಕು ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಸರೋಜಾ ಕಟ್ಟಿಮನಿ ಮಾತನಾಡಿ, ಲಸಿಕೆ ಪಡೆಯುವುದರಿಂದ ಸಾಂಕ್ರಾಮಿಕ ರೋಗಗಳನ್ನು ತಡೆಯಬಹುದು. ಅಲ್ಲದೇ ಮಕ್ಕಳನ್ನು ಗಂಭೀರ ಸಮಸ್ಯೆಗಳಿಂದ ರಕ್ಷಿಸಬಹುದಾಗಿದೆ ಎಂದರು. ಈ ವೇಳೆ ಮಕ್ಕಳಿಗೆ ವಿವಿಧ ಬಗೆಯ ಲಸಿಕೆಗಳನ್ನು ಗೀತಾ ಹಾಗೂ ಹಿರೇಮಠ ಅವರು ನೀಡಿದರು. ತಾಯಂದಿರು, ಗರ್ಭಿಣಿಯರು, ಸಾರ್ವಜನಿಕರು ಇದ್ದರು. ಪುಷ್ಪಾವತಿ ಮಡಿವಾಳರ ವಂದಿಸಿದರು.

ಐಟಿಐ ಕಾಲೇಜಿನಲ್ಲಿ ಸಂದರ್ಶನ

ನರಗುಂದ: ವಿದ್ಯಾರ್ಥಿಗಳು ಅಪ್ರೆಂಟಿಸ್ ತರಬೇತಿಯನ್ನು ಪೂರ್ಣಗೊಳಿಸಿದರೆ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಒಳ್ಳೆಯ ಉದ್ಯೋಗವನ್ನು ಪಡೆಯಬಹುದೆಂದು ಗದುಗಿನ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಯ ಪ್ರಾಚಾರ್ಯ ಡಾ. ಮಲ್ಲೂರ ಬಸವರಾಜ ತಿಳಿಸಿದರು. ತಾಲೂಕಿನ ಶಿರೋಳ ಗ್ರಾಮದ ತೋಂಟದಾರ್ಯ ವಿದ್ಯಾಪೀಠದ, ಮಾದಾರ ಚನ್ನಯ್ಯ ಕೈಗಾರಿಕಾ ತರಬೇತಿ ಸಂಸ್ಥೆ ಮತ್ತು ಗುರುಬಸವ ಜನಕಲ್ಯಾಣ ಸಂಸ್ಥೆ ತೋಂಟದಾರ್ಯ ಮಠದ ಆಶ್ರಯದಲ್ಲಿ ಅಪ್ರೆಂಟಿಸ್ ಸಂದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದರು. ಪಟ್ಟಣ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಅಪ್ರೆಂಟಿಸ್ ತರಬೇತಿಯನ್ನು ಸಂಪೂರ್ಣ ಕಷ್ಟಪಟ್ಟು ಮುಗಿಸಿದರೂ ಮುಂದಿನ ದಿನಗಳಲ್ಲಿ ಒಳ್ಳೆಯ ಉದ್ಯೋಗ ಪಡೆದು ನೆಮ್ಮದಿ ಜೀವನ ನಡೆಸಲು ಸಾಧ್ಯವಿದೆ ಎಂದರು. ಸನ್ನೇರಾ ಕಂಪನಿಯ ಸಂಪನ್ಮೂಲ ಅಧಿಕಾರಿ ಸುನೀಲ ಶೆಟ್ಟಿ ಮತ್ತು ಜಗದೀಶ ಎಸ್. ಮಾತನಾಡಿದರು. ಸುರೇಬಾನ ಐಟಿಐ ಪ್ರಾಚಾರ್ಯ ಆನಂದ ಗಡೇದ ಮಾತನಾಡಿದರು. 62 ತರಬೇತುದಾರರಿಗೆ ಅಪ್ರೆಂಟಿಸ್ ಆಯ್ಕೆ ಮಾಡಲಾಯಿತು. ಸಂಸ್ಥೆಯ ಪ್ರಾಚಾರ್ಯ ಬಸವರಾಜ ಸಾಲಿಮಠ, ಎಸ್.ಬಿ. ಗೊರವರ, ಎಸ್.ವಿ. ಕುಪ್ಪಸ್ತ, ಶ್ರೀಧರ ಬೇವಿನಕಟ್ಟಿ, ವೀರನಗೌಡ, ಪ್ರಭುಲಿಂಗ ಶಿರಿಯಣ್ಣವರ, ಭೂಪತಿ ಧೋತರದ, ಪ್ರೀತಿ ಚಿಕ್ಕಮಠ, ಕಾಳಮ್ಮ ಕಮ್ಮಾರ, ಚಂದ್ರಕಾಂತ ಕಾಡದೇವರಮಠ, ಗಂಗಾಧರ ಫಾರಗೆ ಮುಂತಾದವರು ಇದ್ದರು.



ಗದುಗಿನ ನಗರೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಬಾಲ ಭಾರತೀ ಸಂಸ್ಕಾರ ಸುಧಾ ಹತ್ತು ದಿನಗಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖಂಡ ರಾಜು ಖಾನಪ್ಪನವರ ಮಾತನಾಡಿದರು. ಆಯೋಜಕ ಡಾ. ಗಣೇಶ ಸುಲ್ತಾನಪುರ ಇತರರು ಇದ್ದರು.



ಗದುಗಿನ ಡಿಎಂಎಂ ಆಸ್ಪತ್ರೆಯ ಲಸಿಕಾ ಭವನದಲ್ಲಿ ವಿಶ್ವ ಲಸಿಕಾ ಸಪ್ತಾಹ ಜಾಗೃತಿ ಕಾರ್ಯಕ್ರಮ ನಡೆಯಿತು. ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಡಾ. ರಾಜೇಂದ್ರ ಎಸ್. ಗಡಾದ, ಸರೋಜಾ ಕಟ್ಟಿಮನಿ ಇತರರು ಇದ್ದರು.



ಪಂಚ ರಾಜ್ಯ ಚುನಾವಣೆಯಲ್ಲಿ ಬಿಜೆಪಿ ಉತ್ತಮ ಸಾಧನೆ ಮಾಡಿದ ಹಿನ್ನೆಲೆ ಗದುಗಿನ ಹುಯಿಲಗೋಳ ನಾರಾಯಣರಾಯರ ವೃತ್ತದಲ್ಲಿ ಸೋಮವಾರ ಜಿಲ್ಲಾ ಬಿಜೆಪಿ ವತಿಯಿಂದ ವಿಜಯೋತ್ಸವ ಆಚರಿಸಿ, ಸಿಹಿ ಹಂಚಿ, ಪಟಾಕಿ ಹಚ್ಚಿ ಸಂಭ್ರಮಿಸಲಾಯಿತು.

ತೋಂಟದಾರ್ಯ ಜಾತ್ರಾ ಕಮಿಟಿ ಮೇಲೆ ಕೇಸ್

ಮಠದ ಜಾತ್ರೆಯಲ್ಲಿ ಮನರಂಜನಾ ಯಂತ್ರ ಮುರಿದು 21 ಜನ ಗಾಯಗೊಂಡಿದ್ದ ಪ್ರಕರಣ

• **ಕನ್ನಡಪ್ರಭ ವಾರ್ತೆ** ಗದಗ

ಜಿಲ್ಲೆಯ ದೊಡ್ಡ ಜಾತ್ರೆ ಎನ್ನುವ ಹೆಗ್ಗಳಿಕೆ ಹೊಂದಿರುವ ಮತ್ತು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದ್ದ ಡ್ಯಾನ್ಸಿಂಗ್ ಫ್ಲೋರ್‌ಮನರಂಜನಾ ಯಂತ್ರವು ಚಾಲನೆಯಲ್ಲಿ ಇದ್ದಾಗಲೇ ತಾಂತ್ರಿಕ ದೋಷದಿಂದ ಮುರಿದು ಬಿದ್ದು 21 ಜನರು ಗಾಯಗೊಂಡ ಘಟನೆ ಭಾನುವಾರ ರಾತ್ರಿ ಜರುಗಿದ್ದು, ಘಟನೆ ಸಂಬಂಧಿಸಿದಂತೆ ಜಾತ್ರಾ ಕಮಿಟಿ ಅಧ್ಯಕ್ಷರು ಸೇರಿದಂತೆ 7 ಜನರ ಮೇಲೆ ಸೋಮವಾರ ಶಹರ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.

ಭಾನುವಾರ ರಾತ್ರಿ ಈ ಘಟನೆ ನಡೆದಿದ್ದು, ಯಂತ್ರವು ವೇಗವಾಗಿ ತಿರುಗುತ್ತಿದ್ದಾಗ ಅದರ ಕಬ್ಬಿಣದ ಸಲಾಕೆಗಳು ಹಾಗೂ ಪಾರ್ಶ್ವದ ಭಾಗಗಳು ಇದ್ದಕ್ಕಿದ್ದಂತೆ ಮುರಿದಿವೆ.

ಪರಿಣಾಮವಾಗಿ ಯಂತ್ರದಲ್ಲಿದ್ದವರು ಒಬ್ಬರ ಮೇಲೊಬ್ಬರು ಬಿದ್ದಿದ್ದು, ತೀವ್ರ ಸ್ವರೂಪದ ಪೆಟ್ಟು ಬಿದ್ದು ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ 6 ವರ್ಷದ ಮಗು ಸೇರಿ ಮಹಿಳೆಯರು ಮತ್ತು ವಯಸ್ಕರು ಇದ್ದಾರೆ.

ದೂರು ದಾಖಲು: ಘಟನೆಗೆ ಸಂಬಂಧಿಸಿದಂತೆ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಾತ್ರಾ ಸಮಿತಿ ಅಧ್ಯಕ್ಷರು, ಮ್ಯಾನೇಜರ್‌ಹಾಗೂ ಡ್ಯಾನ್ಸಿಂಗ್ ಫ್ಲೋರ್ ಮಾಲೀಕರು ಸೇರಿದಂತೆ ಏಳು ಜನ ಹಾಗೂ ಇತರರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲಾಗಿದೆ.

ಪರಶುರಾಮ ಸಮಗಾರ, ವಿಶ್ವನಾಥ ದೊಡ್ಡಮನಿ, ನೂರಅಹ್ಮದ ಧಾರವಾಡ, ನಾರಾಯಣ ದೊಡ್ಡಮನಿ, ಮಲ್ಲು ಬಾದನ, ವಿನಾಯಕ ಮಾನ್ವಿ (ಜಾತ್ರಾ ಕಮಿಟಿ ಅಧ್ಯಕ್ಷ), ಎಂ.ಎಸ್. ಅಂಗಡಿ (ತೋಂಟದಾರ್ಯ ಮಠದ ಮ್ಯಾನೇಜರ್) ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಗಾಯಗೊಂಡವರನ್ನು ತಕ್ಷಣವೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದ್ದು ಚಿಕಿತ್ಸೆ ಮುಂದುವರಿದಿದೆ. ಘಟನೆಯಲ್ಲಿ ಜಹೀರ ಅಹ್ಮದ್ ಖಾಜಿ (42), ಕಲಂದರ ಖಾಜಿ (15), ಶಿಫಾ ಖಾಜಿ (16), ಸಮೀನಾ ಗಂಗಾವತಿ (18), ಸನಾ ಖಾಜಿ (15), ಸಗುಪ್ತಾ ಖಾಜಿ (14), ಜ್ಯೋತಿ ಗಬ್ಬೂರ (18), ನಾಜಿಯಾ ತೋಟಿಗಾರ (20), ಕಿರಣ ಹುಲ್ಲೂರ (25), ದೀಪಕ ಹುಬ್ಬಳ್ಳಿ (29), ರಾಜೇಸಾಬ ಅಣ್ಣಿಗೇರಿ (23), ಸುಮನ್ ನವಲಗುಂದ (28), ವಿಶಾಲ ನವಲಗುಂದ (6), ಸಲ್ಮಾ ಹಂದೂರ (17), ಖುಷಿ ದಲಬಂಜನ (14), ಕಿರಣ ಕಬಾಡಿ (21), ಮಾಹೀನ್ ಕಂದಗಲ್ (10), ರುಬಿನಾ ಕಂದಗಲ್ (36), ಮುಸ್ತಾಕ ಹಳೆಮನಿ (25), ಪ್ರದೀಪಕುಮಾರ ಕಮ್ಮಾರ (25), ಸತೀಶ ಗಬ್ಬೂರ (22) ಗಾಯಗೊಂಡಿದ್ದು, ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಂಗಡಿಗಳ ತೆರವು: ಘಟನಾ ಸ್ಥಳದಲ್ಲಿದ್ದ ಅಂಗಡಿಗಳನ್ನು ಸೋಮವಾರ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಇನ್ನುಳಿದ ಸಿಬ್ಬಂದಿ ತೆರವು ಕಾರ್ಯಾಚರಣೆ ನಡೆಸಿದರು. ಈ ಸಂದರ್ಭದಲ್ಲಿ ಭಾನುವಾರ ರಾತ್ರಿ ಘಟನೆ ನೆನೆದು ಜನರು ಬೇಸರ ವ್ಯಕ್ತಪಡಿಸಿದರು.



ಗದಗ ತೋಂಟದಾರ್ಯ ಮಠದ ಜಾತ್ರೆಯಲ್ಲಿ ನಡೆದ ಅವಘಡ ಹಿನ್ನೆಲೆ ಘಟನಾ ಸ್ಥಳದಲ್ಲಿದ್ದ ಅಂಗಡಿಗಳನ್ನು ಸೋಮವಾರ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ತೆರವು ಮಾಡಿಸಿದರು.

- ಜಾತ್ರಾ ಸಮಿತಿ ಅಧ್ಯಕ್ಷರು, ಮ್ಯಾನೇಜರ್ ಹಾಗೂ ಡ್ಯಾನ್ಸಿಂಗ್ ಫ್ಲೋರ್‌ಮಾಲೀಕರು ಸೇರಿದಂತೆ ಏಳು ಜನ ಹಾಗೂ ಇತರರ ವಿರುದ್ಧ ಕೇಸ್
- ಘಟನಾ ಸ್ಥಳದಲ್ಲಿದ್ದ ಅಂಗಡಿಗಳನ್ನು ಸೋಮವಾರ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಇನ್ನುಳಿದ ಸಿಬ್ಬಂದಿ ತೆರವು ಕಾರ್ಯಾಚರಣೆ
- ನಿಯಮಬಾಹಿರವಾಗಿ ಮತ್ತು ಬೇಕಾಬಿಟ್ಟಿಯಾಗಿ ಮಳಿಗೆ ಹಾಕಿದ್ದರಿಂದಲೇ ದುರಂತ: ಆರೋಪ
- ಬೇಜವಾಬ್ದಾರಿಯಿಂದಲೇ 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಕೆಲವರ ಸ್ಥಿತಿ ಚಿಂತಾಜನಕ, ಇದಕ್ಕೆ ಜಿಲ್ಲಾಡಳಿತ, ನಗರಸಭೆ ಹಾಗೂ ಮಳಿಗೆಗಳ ಟೆಂಡರ್ ದಾರರೇ ಹೊಣೆ: ಮುಖಂಡರ ಆಕ್ರೋಶ

ಮಳಿಗೆಗಳ ತೆರವಿಗೆ ಮನವಿ



ಹಿಂದೂ ವೀರಶೈವ ಲಿಂಗಾಯತ ಯುವ ವೇದಿಕೆ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

• **ಕನ್ನಡಪ್ರಭ ವಾರ್ತೆ** ಗದಗ

ನಗರದ ತೋಂಟದಾರ್ಯ ಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಹಾಕಲಾಗಿರುವ ಮಳಿಗೆಗಳನ್ನು ಕೂಡಲೇ ತೆರವುಗೊಳಿಸುವಂತೆ ಆಗ್ರಹಿಸಿ, ಹಿಂದೂ ವೀರಶೈವ ಲಿಂಗಾಯತ ಯುವವೇದಿಕೆಯ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಪ್ರತಿಭಟನೆಗೆ ದಲಿತ ಸಮಿತಿ ಹಾಗೂ ಮಾದಿಗ ಸಮುದಾಯದ ಮುಖಂಡರು ಬೆಂಬಲ ಸೂಚಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ವಿವಿಧ ಹಿಂದೂಪರ ಸಂಘಟನೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರಾಜು ಖಾನಪ್ಪನವರ, ಜಾತ್ರೆಯಲ್ಲಿ ನಡೆದ ಭೀಕರ ಅಪಘಾತವು ಅತ್ಯಂತ ನೋವಿನ ಸಂಗತಿಯಾಗಿದೆ. ಸಾಮಾನ್ಯವಾಗಿ ಜಾತ್ರೆಗಳಿಗೆ ನಿಗದಿತ ದಿನಾಂಕಗಳಿರುತ್ತವೆ. ಆದರೆ ಇಲ್ಲಿ ನಿಯಮಬಾಹಿರವಾಗಿ ಮತ್ತು ಬೇಕಾಬಿಟ್ಟಿಯಾಗಿ ಮಳಿಗೆಗಳನ್ನು ಹಾಕಿದ್ದರಿಂದಲೇ ಈ ದುರಂತ ಸಂಭವಿಸಿದೆ. ಇದಕ್ಕೆ ಜಿಲ್ಲಾಡಳಿತ, ನಗರಸಭೆ ಹಾಗೂ ಮಳಿಗೆಗಳ ಟೆಂಡರ್‌ದಾರರೇ ನೇರ ಹೊಣೆ ಎಂದು ಗಂಭೀರವಾಗಿ ಆರೋಪಿಸಿದರು.

ಇವರ ಬೇಜವಾಬ್ದಾರಿಯಿಂದಲೇ 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಕೆಲವರ ಸ್ಥಿತಿ ಚಿಂತಾಜನಕವಾಗಿದೆ. ಒಂದು ವೇಳೆ ಸಾವು-ನೋವು ಸಂಭವಿಸಿದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮಹೇಶ್ ರೋಖಡೆ, ಸತೀಶ್ ಕುಂಬಾರ, ವೆಂಕಟೇಶ್ ದೊಡ್ಡಮನಿ, ಕುಮಾರ್‌ನಡಿಗೇರಿ, ಪಿ.ಎಸ್. ಕಾಳೆ, ಪರಶುರಾಮ್ ಆಡಿನ, ಸದಾನಂದ್ ಸಿಂಗ್, ಗುರ್ಲ್ ಹೊಸೂರ, ಶಿವಯೋಗಿ ಹಿರೇಮಠ, ಮೌನೇಶ್ ದಾಸರ್, ಈರಪ್ಪ ವಾಲ್ಮೀಕಿ, ಮಂಜು ಪೂಜಾರ್, ಮಂಜು ಗುಡಿ, ರಾಮು ಗೌಡ್ರು, ಅಶೋಕ್ ಭಜಂತ್ರಿ, ಸಂಜು ಚಟ್ಟಿ, ಈರಣ್ಣ ಪೂಜಾರಿ, ಅಭಿಷೇಕ್ ಕುರ್ತಕೋಟಿ, ರಾಘವೇಂದ್ರ ಪರಪುರ ಹಾಗೂ ಶಶಿಧರ ಗಟ್ಟಿ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

ಚಿನ್ನದ ಸರ ಕದ್ದ ಆರೋಪಿ ಬಂಧನ

ಲಕ್ಷ್ಮೇಶ್ವರದ ಬಸ್ ನಿಲ್ದಾಣದಲ್ಲಿ ಕಳ್ಳತನ ಪ್ರಕರಣ ಭೇದಿಸಿದ ಪೊಲೀಸರು



ಚಿನ್ನ ತಾಳಿ ಸರವನ್ನು ಪೊಲೀಸರು ವಶಪಡಿಸಿಕೊಂಡಿರುವುದು.

• **ಕನ್ನಡಪ್ರಭ ವಾರ್ತೆ** ಲಕ್ಷ್ಮೇಶ್ವರ

ಕಳೆದ ಏಪ್ರಿಲ್‌ನಲ್ಲಿ ಪಟ್ಟಣದ ಬಸ್ ನಿಲ್ದಾಣದಲ್ಲಿ 4 ಮಹಿಳೆಯರ ಚಿನ್ನದ ತಾಳಿ ಸರ ಕದ್ದು ಪರಾರಿಯಾಗಿದ್ದ ಕಳ್ಳನನ್ನು ಬಂಧಿಸುವಲ್ಲಿ ಪಟ್ಟಣದ ಪೊಲೀಸರು ಯಶಸ್ವಿಯಾಗಿದ್ದಾರೆ.

ಸಿಪಿಐ ಬಿ.ವಿ. ನ್ಯಾಮಗೌಡ ಹಾಗೂ ಪಿಎಸ್‌ಐ ನಾಗರಾಜ ಗಡದ, ಕ್ರೈಂ ಪಿಎಸ್‌ಐ ಟಿ.ಕೆ. ರಾಠೋಡ, ಪ್ರೊ. ಪಿಎಸ್‌ಐ ಪೂಜಾ ಪಾರ್ಥಹಳ್ಳಿ, ಆನಂದಸಿಂಗ್ ದೊಡ್ಡಮನಿ ಅವರ ನೇತೃತ್ವದಲ್ಲಿ ಕಳ್ಳರ ಪತ್ತೆಗೆ ಜಾಲ ಬೀಸಿ ಕಳ್ಳ ರಾಜವೀರ ಕಾಳೆ ಎಂಬಾತನನ್ನು ಬಂಧಿಸಿ ಚಿನ್ನದ ತಾಳಿ ಸರ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಸಿಪಿಐ ಬಿ.ವಿ. ನ್ಯಾಮಗೌಡ ತಿಳಿಸಿದರು.

ಅಲ್ಲದೆ ಪಟ್ಟಣದ ಬಸ್ ನಿಲ್ದಾಣದಲ್ಲಿ ಏ. 25ರಂದು ರಾತ್ರಿ ವೇಳೆ ವ್ಯಕ್ತಿಯೊಬ್ಬನನ್ನು ಬೆದರಿಸಿ ಆತನ ಜೇಬಿನಲ್ಲಿದ್ದ ₹7700 ಕಸಿದುಕೊಂಡು ಹೋಗಿರುವ ಕುರಿತು ಪ್ರಕರಣ ದಾಖಲಾಗಿತ್ತು.

ಈ ಕುರಿತು ಎಸ್ಪಿ ಹಾಗೂ ಡಿವೈಎಸ್‌ಪಿ ಮುರ್ತುಜಾ ಖಾದ್ರಿ ಅವರ ಮಾರ್ಗದರ್ಶನದಲ್ಲಿ ತನಿಖೆ ನಡೆಸಿದ ಪಟ್ಟಣದ ಸಿಪಿಐ ಬಿ.ವಿ. ನ್ಯಾಮಗೌಡ, ಪಿಎಸ್‌ಐ ನಾಗರಾಜ ಗಡದ, ಟಿ.ಕೆ. ರಾಠೋಡ ಹಾಗೂ ಇತರೆ ಸಿಬ್ಬಂದಿ ಜತೆ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಿ ಹಣ ಮತ್ತು 1 ಬೈಕ್ ವಶಪಡಿಸಿಕೊಂಡಿದ್ದಾರೆ.

ಈ ವೇಳೆ ಪೊಲೀಸ್ ಸಿಬ್ಬಂದಿಗಳಾದ ಆರ್. ಎಸ್. ಯರಗಟ್ಟಿ, ಎಂ.ಎ. ಶೇಖ್, ಎಂ.ಎಸ್. ಬಳ್ಳಾರಿ, ಆನಂದ ಕಮ್ಮಾರ, ಸಿ.ಎಸ್. ಮಠಪತಿ, ಡಿ.ಎಸ್. ನದಾಫ್, ಎ.ಎಲ್. ಕರ್ಜಗಿ, ಎಚ್.ಸಿ. ಕಲ್ಲಣ್ಣವರ, ಮಧುಚಂದ್ರು ಧಾರವಾಡ, ಮಾರ್ತಾಂಡಪ್ಪ ಉಪ್ಪಾರ, ಎಸ್.ಡಿ. ಬೂತಪ್ಪನವರ, ಗುರು ಬೂದಿಹಾಳ, ಅಪ್ಪಣ್ಣ ರಾಠೋಡ, ಸಂಜು ಕೊರಡೂರ ಸೇರಿದಂತೆ ಅನೇಕರು ಇದ್ದರು.

ಸರ್ಕಾರದ ಯೋಜನೆಗಳು ಸದ್ಬಳಕೆಯಾಗಲಿ

ಸಮುದಾಯ ಭವನ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಚಾಲನೆ

• **ಕನ್ನಡಪ್ರಭ ವಾರ್ತೆ** ಮುಳಗುಂದ

ಪಟ್ಟಣದ ಪುರದ ಓಣಿಯಲ್ಲಿ ಅಂದಾಜು ₹20 ಲಕ್ಷ ವೆಚ್ಚದಲ್ಲಿ ಬಸವೇಶ್ವರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಪಟ್ಟಣದಲ್ಲಿ 2Χ20 ಎಂವಿಎ ಸಾಮರ್ಥ್ಯದ 110/11 ಕೆವಿ ವಿದ್ಯುತ್ ವಿತರಣಾ ಕೇಂದ್ರ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದ್ದು, ಅವುಗಳ ಸದುಪಯೋಗ ಸರಿಯಾಗಿ ನಡೆಯಲು ಸಮುದಾಯದ ಸಹಕಾರ ಪ್ರಮುಖವಾಗಿದೆ. ಅದೇ ರೀತಿ ಎಲ್ಲ ಕಾಮಗಾರಿಗಳು ಅತ್ಯಂತ ಗುಣಮಟ್ಟದಿಂದ ಕೂಡಿರುತ್ತವೆ ಎಂಬ ವಿಶ್ವಾಸವೂ ಇದೆ ಎಂದರು.

ಈ ವೇಳೆ ಹೆಸ್ಕಾಂ ಅಧ್ಯಕ್ಷ ಸೈಯದ್ ಅಜೀಮಪೀರ್‌ಎಸ್. ಖಾದ್ರಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಜಿಪಂ ಮಾಜಿ ಅಧ್ಯಕ್ಷ ಸಿದ್ದು ಪಾಟೀಲ, ಹಿರಿಯರಾದ ಶಿವಣ್ಣ ನೀಲಗುಂದ, ಎಂ.ಡಿ. ಬಟ್ಟೂರ, ವಿಜಯ ನೀಲಗುಂದ, ಇಮ್ಮಣ್ಣ ಚವಳಿಕಾಯಿ, ಎನ್.ಆರ್. ದೇಶಪಾಂಡೆ, ಅಶೋಕ ಹುಣಸಿಮರದ, ಅಜ್ಜಪ್ಪ ಹುಗ್ಗೇಣ್ಣವರ, ಬಸವರಾಜ ಬಾತಾಖಾನಿ, ಬಸವರಾಜ ಬಡ್ನಿ, ಮನಸ್ಸೂರ ಹಣಗಿ, ಕೆ.ಎಲ್. ಕರಿಗೌಡರ, ಮಹಾಂತಪ್ಪ ನೀಲಗುಂದ, ಹಮ್ಮೀದ ಮುಜಾವರ ಪ್ರವಾಸೋದ್ಯಮ ಇಲಾಖೆಯ ಕೊಟ್ರೇಶ ವಿಭೂತಿ, ಪಪಂ ಮುಖ್ಯಾಧಿಕಾರಿ ಮಂಜುನಾಥ ಗುಳೇದ ಸೇರಿದಂತೆ ಅಧಿಕಾರಿಗಳು, ಪಪಂ ಮಾಜಿ ಸದಸ್ಯರು, ಪುರದ ಬಸವೇಶ್ವರ ಯುವಕ ಮಂಡಳ ಸದಸ್ಯರು ಇದ್ದರು.



ಮುಳಗುಂದ ಪುರದ ಓಣಿಯಲ್ಲಿ ಅಂದಾಜು ₹20 ಲಕ್ಷ ವೆಚ್ಚದಲ್ಲಿ ಬಸವೇಶ್ವರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಭೂಮಿಪೂಜೆ ನೆರವೇರಿಸಿದರು.

> ಪಟ್ಟಣದ ಜನತೆಯೇ ಬಹುದಿನಗಳ ಬೇಡಿಕೆಯಾದ ವಿದ್ಯುತ್ ವಿತರಣಾ ಕೇಂದ್ರ ನಿರ್ಮಾಣಕ್ಕೆ ಸಚಿವ ಎಚ್.ಕೆ. ಪಾಟೀಲರ ನಿರಂತರ ಪ್ರಯತ್ನ ಸಾಕಾರಗೊಂಡಿರುವುದು ನಿಜಕ್ಕೂ ಪಟ್ಟಣದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನತೆಗೆ ಸಂತಸ ನೀಡಿದೆ. ಹಾಗೇ ಪಟ್ಟಣದಲ್ಲಿ ಒಂದೇ ದಿನ ಹಲವು ಕಾಮಗಾರಿಗಳಿಗೆ ಚಾಲನೆ ದೊರೆತಿರುವುದು ಜನರಲ್ಲಿ ಹರ್ಷದ ವಾತಾವರಣ ಮೂಡಿಸಿದೆ.
> • **ಬಸವರಾಜ ಸುಂಕಾಪುರ** ಮುಳಗುಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು

ಸಂತಸ... ಮುಂಡರಗಿಯಲ್ಲಿ ಪಕ್ಷದ ಕಾರ್ಯಕರ್ತರಿಂದ ವಿಜಯೋತ್ಸವ

ಉಪಕದನದಲ್ಲಿ ಗೆಲುವು: ಕಾಂಗ್ರೆಸ್ ಸಂಭ್ರಮ

• **ಕನ್ನಡಪ್ರಭ ವಾರ್ತೆ** ಮುಂಡರಗಿ

ದಾವಣಗೆರೆ ಹಾಗೂ ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆ ಸೋಮವಾರ ಸಂಜೆ ಪಟ್ಟಣದ ಬೃಂದಾವನ ವೃತ್ತದಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ಕಮಿಟಿ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಮೋಹನ್ ಲಿಂಬಿಕಾಯಿ ಮಾತನಾಡಿ, ಎರಡು ಕ್ಷೇತ್ರದ ಉಪಚುನಾವಣೆಯಲ್ಲಿ ವಿರೋಧ ಪಕ್ಷದವರು ಕಾಂಗ್ರೆಸ್ ವಿರುದ್ಧ ಇಲ್ಲಸಲ್ಲದ ಆರೋಪವನ್ನು ಮಾಡಿದರೂ ಮತದಾರರು ಕಾಂಗ್ರೆಸ್ ಕೈಬಿಡಲಿಲ್ಲ.

2023ರ ಚುನಾವಣೆಯ ಗ್ಯಾರಂಟಿಗಳೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಕರ್ನಾಟಕದ ನಾಗರಿಕರಿಗೆ ಕಾಂಗ್ರೆಸ್ ಪಕ್ಷದಿಂದ ಮಾತ್ರ ಉತ್ತಮ ಭವಿಷ್ಯ ಇದೆ ಎಂದು ಅರಿತಿದ್ದಾರೆ.



ಮುಂಡರಗಿಯಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು.

ರಾಜ್ಯದಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದು, ಸುಮಾರು 50 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ತುಂಬಿಕೊಳ್ಳಲು ಕಾಂಗ್ರೆಸ್ ಸರ್ಕಾರ ನಿರ್ಧರಿಸಿದೆ. ಮತದಾರ ಪ್ರಭುವಿಗೆ ಸ್ಪಂದಿಸುವವರಿಗೆ ಕಾರ್ಯಕರ್ತರ ಆಶೀರ್ವಾದ ಸದಾ ಇದ್ದೇ ಇರುತ್ತದೆ ಎಂದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಕಮಿಟಿ ಹಾಗೂ ತಾಲೂಕು ಪಂಚ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಡಿ.ಡಿ. ಮೋರನಾಳ ಮಾತನಾಡಿ, ದಾವಣಗೆರೆ ಹಾಗೂ ಬಾಗಲಕೋಟೆ ಮತದಾರರಿಗೆ ಅಭಿನಂದಿಸುವೆ. ಎರಡೂ ಕ್ಷೇತ್ರದವರು ಅಭೂತಪೂರ್ವ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಡಾ. ಬಿ.ಎಸ್. ಮೇಟಿ, ರಾಘವೇಂದ್ರ ಕುರಿಯವರ, ಡಿ.ಎಂ. ಕಾತರಕಿ, ರುದ್ರಗೌಡ ಪಾಟೀಲ, ರಾಜಾಭಕ್ಷಿ ಬೆಟಗೇರಿ, ಮುದಕಪ್ಪ ಕುಂಬಾರ, ರಾಜು ಡಾವಣಗೇರಿ, ನಾಗರಾಜ ಹೊಂಬಳಗಟ್ಟಿ, ಅಂದಪ್ಪ ಬಳ್ಳಾರಿ, ಆರ್.ಎಂ. ಸೈದರ್, ಯಲ್ಲಪ್ಪ ಹೊಂಬಳಗಟ್ಟಿ, ಸುರೇಶ ಉಪ್ಪಾರ, ರಾಮು ಭಜಂತ್ರಿ, ವಿನೋದ ವಡ್ಡರ, ದಶರತಪ್ಪ ಕುರಿ, ಮುತ್ತು ಬಳ್ಳಾರಿ, ಸುಲೇಮಾನ್ ಬೇವೂರ, ಉಮೇಶ ಕಲಾಲ್, ಮಂಜುನಾಥ ಕಟ್ಟಿಮನಿ, ಸುರೇಶ ಮಾಗಡಿ, ಆನಂದಗೌಡ ಪಾಟೀಲ ಮುಂಡವಾಡ, ವಿಶ್ವನಾಥ ಪಾಟೀಲ, ರಾಘವೇಂದ್ರ ನರೇಗಲ್, ಪ್ರಶಾಂತಗೌಡ ಪಾಟೀಲ, ಅಡಿವೆಪ್ಪ ಛಲವಾದಿ, ಖೈರೂನಬಿ ಫೀರವಾಲೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

- ಎರಡು ಕ್ಷೇತ್ರದ ಉಪ ಚುನಾವಣೆಯಲ್ಲಿ ವಿರೋಧ ಪಕ್ಷದವರು ಕಾಂಗ್ರೆಸ್ ವಿರುದ್ಧ ಇಲ್ಲಸಲ್ಲದ ಆರೋಪವನ್ನು ಮಾಡಿದರೂ ಮತದಾರರು ಕಾಂಗ್ರೆಸ್ ಕೈಬಿಡಲಿಲ್ಲ: ಮೋಹನ್ ಲಿಂಬಿಕಾಯಿ

ಪ್ರಧಾನಿ ಕಾರ್ಯವೈಖರಿಗೆ ಹೆಚ್ಚಿದ ಜನಬೆಂಬಲ



ಬಿಜೆಪಿ ಕಾರ್ಯಕರ್ತರ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

• **ಕನ್ನಡಪ್ರಭ ವಾರ್ತೆ** ನರಗುಂದ

ದೇಶದ 22 ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದಲ್ಲಿ ಆಡಳಿತ ನಡೆಸುತ್ತಿದೆ. ನರೇಂದ್ರ ಮೋದಿಜಿ ಆಡಳಿತ ವೈಖರಿ ಪಂಚರಾಜ್ಯಗಳ ಚುನಾವಣೆಯಲ್ಲಿ ಜಯ ಸಾಧಿಸುವಂತೆ ಮಾಡಿದೆ ಎಂದು ಬಿಜೆಪಿ ಮುಖಂಡ ಉಮೇಶಗೌಡ ಪಾಟೀಲ ತಿಳಿಸಿದರು.

ಸೋಮವಾರ ಪಟ್ಟಣದ ಶಿವಾಜಿ ವೃತ್ತದಲ್ಲಿ ಪಂಚ ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿದ ಹಿನ್ನೆಲೆ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿ ಮಾತನಾಡಿ, ಪಶ್ಚಿಮ ಬಂಗಾಳ ಬಾಂಗ್ಲಾ ವಲಸಿಗರಿಂದ ಉಸಿರುಗಟ್ಟಿದ ವಾತಾವರಣದಲ್ಲಿ ಸಿಲುಕಿತ್ತು. ಕೊಲೆ ಸುಲಿಗೆ ಹಿಂಸಾತ್ಮಕ ಘಟನೆಗಳಲ್ಲಿಯೇ ಜೀವನ ಕಳೆಯುತ್ತಿದ್ದ ಅಲ್ಲಿನ ಹಿಂದೂ ನಿವಾಸಿಗಳು ಬಿಜೆಪಿ ಗೆಲುವಿನಿಂದ ಆನಂದ ಪಡುತ್ತಿದ್ದಾರೆ ಎಂದರು.

ಅಧಿಕಾರಕ್ಕಾಗಿ ಬಿಜೆಪಿ ಆಸೆಪಟ್ಟಿಲ್ಲ. ಸರ್ವರನ್ನು ಸ್ಪರ್ಶಿಸಿ, ಅವರೆಲ್ಲರನ್ನೂ ರಕ್ಷಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಬಿಜೆಪಿ ಕೆಲಸ ಮಾಡುತ್ತಿದೆ. ಪಶ್ಚಿಮ ಬಂಗಾಳ ಗೆಲುವು ದೇಶದ ಹಿಂದೂಗಳಿಗೆ ಖುಷಿ ತಂದಿದೆ ಎಂದರು.

ವಸಂತ ಜೋಗಣ್ಣವರ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಶಿವಾನಂದ ಮುತ್ತವಾಡ, ಮಲ್ಲಪ್ಪ ಮೇಟಿ, ಪ್ರಕಾಶಗೌಡ ತಿರಕನಗೌಡ್ರ, ಮಂಜು ಆನೇಗುಂದಿ, ಎಸ್.ಆರ್. ಪಾಟೀಲ, ಪ್ರವೀಣ ಅಳಗವಾಡಿ, ಸಂಗನಗೌಡ ಪಾಟೀಲ, ನವೀನಗೌಡ ಪಾಟೀಲ, ಮಂಜು ಮೆಣಸಗಿ, ಹಸನ ನವದಿ, ಬಸಪ್ಪ ಮಳಗಿ, ಸಿದ್ದೇಶ ಹೂಗಾರ, ಸಂತೋಷ ಹಂಚಿನಾಳ, ಕಿರಣ ಮುಧೋಳೆ, ಪ್ರವೀಣ ವಡ್ಡರ, ಶಿವು ದಲಭಂಜನ ಸೇರಿದಂತೆ ಮುಂತಾದವರು ಇದ್ದರು.

ಎಲೈಟ್ ಇಲೆವನ್ ತಂಡ ಚಾಂಪಿಯನ್



ವಿಜೇತ ತಂಡಕ್ಕೆ ಸಚಿವ ಎಚ್.ಕೆ. ಪಾಟೀಲ ಬಹುಮಾನ ವಿತರಿಸಿದರು.

• **ಕನ್ನಡಪ್ರಭ ವಾರ್ತೆ** ಗದಗ

ನಗರದ ವಿದ್ಯಾದಾನ ಸಮಿತಿ ಮೈದಾನದಲ್ಲಿ ಕಳೆದ 20 ದಿನಗಳಿಂದ ಕ್ರಿಕೆಟ್ ಅಭಿಮಾನಿಗಳನ್ನು ರಂಜಿಸಿದ್ದ ಕೆ.ಎಚ್. ಪಾಟೀಲ ಕ್ರಿಕೆಟ್ ಲೀಗ್ ಸೀಜನ್- 2ರ ಪಂದ್ಯಾವಳಿಯಲ್ಲಿ ಶನಿವಾರ ರಾತ್ರಿ ಎಲೈಟ್ ಇಲೆವೆನ್ 7 ವಿಕೆಟ್ ಅಂತರದಲ್ಲಿ ಗೆಲುವು ದಾಖಲಿಸುವ ಮೂಲಕ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು. ಎದುರಾಳಿ ಸ್ಟ್ರೈಕರ್ಸ್ ತಂಡ ರನ್ನರ ಅಪ್ ಗೆ ತೃಪ್ತಿಪಟ್ಟಿತು.

ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಸ್ಟ್ರೈಕರ್ಸ್ ತಂಡ ಮೊದಲ ವಿಕೆಟ್ ನಷ್ಟಕ್ಕೆ 6 ಒವರ್‌ಗಳಲ್ಲಿ 48 ರನ್ ಗಳಿಸಿದರೂ ನಿಗದಿತ 10 ಒವರ್ ಗಳಲ್ಲಿ 5 ವಿಕೆಟ್ ನಷ್ಟಕ್ಕೆ 72 ರನ್ ಗಳಿಸಲಷ್ಟೇ ಶಕ್ತವಾಯಿತು. ಸ್ಟ್ರೈಕರ್ಸ್ ತಂಡದ ಪರವಾಗಿ ನಾಯಕ ಫಯಾಜ್ 18 ಎಸೆತಗಳಲ್ಲಿ 12 ರನ್ ಗಳಿಸಿದರೆ, ತಯ್ಯಬ್ 21 ಎಸೆತಗಳಲ್ಲಿ 5 ಫೋರ್ 1 ಸಿಕ್ಸರ್ ಮೂಲಕ 36 ರನ್ ಗಳಿಸಿದರು. ನಂತರ ಬಂದ ಬ್ಯಾಟ್ಸ್‌ಮನ್‌ಗಳಾದ ಅಲ್ತಾಮಾಶ್ 2, ಜಗದೀಶ 1, ಚನ್ನಪ್ಪ 4, ರಿಯಾಜ್ 1 ಹಾಗೂ ಆರೀಫ್ 2 ರನ್ ಗಳಿಸಿದರು. ಎಲೈಟ್ ಇಲೆವೆನ್ ತಂಡದ ಪರವಾಗಿ ನಿಹಾಲ್ ಆಕಾಶ್ 2 ಒವರ್‌ಗಳಲ್ಲಿ 13 ರನ್ ನೀಡಿ 2 ವಿಕೆಟ್, ಶಿವು 2 ಒವರ್‌ಗಳಲ್ಲಿ ಮೇಡನ್ ಸಹಿತ 3 ರನ್ ನೀಡಿ 2 ವಿಕೆಟ್ ಪಡೆದು ಮಿಂಚಿದರು.

ಇದಕ್ಕುತ್ತರವಾಗಿ ಬ್ಯಾಟಿಂಗ್ ನಡೆಸದ ಎಲೈಟ್ ಇಲೆವೆನ್ ಆರಂಭಿಕ ಬ್ಯಾಟ್ಸ್‌ಮನ್ ವಿಜಯ ಬಾರಕೇರ್ 21 ಎಸೆತಗಳಲ್ಲಿ 3 ಫೋರ್ ಸಹಿತ 30 ರನ್ ನೀಡಿ ಅತ್ಯುತ್ತಮ ಆರಂಭ ಒದಗಿಸಿದರು. ಪ್ರೇಮ್ ಬಿ. ಶೂನ್ಯಕ್ಕೆ ಔಟಾದರೆ, ಬಾಲಿಂಗ್ ನಲ್ಲಿ ಅದ್ಭುತ ಪ್ರದರ್ಶನ ನೀಡಿದ್ದ ನಿಹಾಲ್ ಆಕಾಶ 18 ಎಸೆತಗಳಲ್ಲಿ 3 ಫೋರ್, 1 ಸಿಕ್ಸರ್ ಸಹಿತ 27 ರನ್ ಗಳಿಸಿದರು. ಸಂತೋಷ ನಾಯಕ 5 ಜಗದೀಶರಡ್ಡಿ 8 ರನ್ ಗಳಿಸಿ ಗೆಲುವಿನ ನಗೆ ಬೀರಿದರು. ವಿಜೇತ ಎಲೈಟ್ ಇಲೆವೆನ್ ತಂಡ 1.50 ಲಕ್ಷ ರೂ. ನಗದು ಪ್ರಶಸ್ತಿಯೊಂದಿಗೆ ಟ್ರೋಫಿ ಪಡೆಯಿತು.

ಕಡಲೆ ಖರೀದಿ ಅವಧಿ ವಿಸ್ತರಣೆ ಮಾಡಿ: ಸಿ.ಸಿ. ಪಾಟೀಲ



ನರಗುಂದ: 2025- 26ನೇ ಸಾಲಿನ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಹಿಂಗಾರು ಹಂಗಾಮಿನ ಕಡಲೆ ಖರೀದಿ ಅವಧಿ ವಿಸ್ತರಣೆ ಮಾಡಬೇಕು ಎಂದು ಶಾಸಕ ಸಿ.ಸಿ. ಪಾಟೀಲ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಹಿಂಗಾರು ಹಂಗಾಮಿನ ಕಡಲೆ ಖರೀದಿಗಾಗಿ ಜಿಲ್ಲಾದ್ಯಂತ 72 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಈ ಕೇಂದ್ರಗಳಲ್ಲಿ ಈ ವರೆಗೆ ಒಟ್ಟು 19133 ಜನ ರೈತರು ನೋಂದಾಯಿಸಿಕೊಂಡಿದ್ದಾರೆ. ಅದರಲ್ಲಿ ಈವರೆಗೆ ಒಟ್ಟು 15510 ಜನ ರೈತರು ಕಡಲೆ ಮಾರಾಟ ಮಾಡಿದ್ದಾರೆ.

ಇನ್ನೂ 3623 ರೈತರು ಕಡಲೆ ಮಾರಾಟ ಮಾಡಬೇಕಾಗಿದೆ. ಆದೇಶದಲ್ಲಿ ಸೂಚಿಸಿರುವ ಷರತ್ತುಗಳನ್ವಯ ಕಡಲೆ ನೋಂದಣಿ ಮತ್ತು ಖರೀದಿ 90 ದಿನಗಳವರೆ ಕಾಲಾವಧಿ ನಿಗದಿಪಡಿಸಲಾಗಿತ್ತು. ನಾಫೆಡ್ ಅವರಿಂದ ಖಾಲಿ ಗೋಣಿ ಚೀಲ ಮತ್ತು ಕ್ಯೂ ಆರ್‌ಕೋಡ್ ನಿಗದಿತ ಸಮಯಕ್ಕೆ ಬಾರದೇ ಇರುವುದರಿಂದ ಖರೀದಿ ವಿಳಂಬವಾಗಿದೆ.

ಈ ಹಿನ್ನೆಲೆಯಲ್ಲಿ 2025- 26ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ರೈತರ ಹಿತದೃಷ್ಟಿಯಿಂದ ಈಗಾಗಲೇ ನೋಂದಣಿ ಆಗಿರುವ ರೈತರ ಕಡಲೆ ಖರೀದಿ ಕಾಲಾವಧಿ ವಿಸ್ತರಿಸಲು ಜಿಲ್ಲಾಧಿಕಾರಿಗಳ ಮೂಲಕ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಆಗ್ರಹಿಸಿದ್ದಾರೆ.

ಚನ್ನಮ್ಮ ನಿಧನ



ಗದಗ: ಜಿಲ್ಲೆಯ ರೋಣ ತಾಲೂಕಿನ ಅಬ್ಬಿಗೇರಿ ಗ್ರಾಮದ ನಿವಾಸಿ, ಶತಾಯುಷಿ ಚನ್ನಮ್ಮ ಶಿದ್ಲಿಂಗಪ್ಪ ಹರದಾರಿ(101) ಸೋಮವಾರ ನಿಧನರಾದರು. ಮೃತರಿಗೆ ಐವರು ಪುತ್ರಿಯರು, ಮೂವರು ಪುತ್ರರು ಸೇರಿದಂತೆ ಅಪಾರ ಬಂಧುಗಳಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಗ್ರಾಮದಲ್ಲಿ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.